**C.C.224/2019**
**P.W.1**

**ದಿನಾಂಕ:18-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ** ಶ್ರೀ.ಜೆ.ಕೆ.ಆರ್.ವಕೀಲರಿಂದ

1. ನಾನು ಸೀಜನ್ ವ್ಯಾಪಾರ ಮಾಡುತ್ತೇನೆ. ನನಗೆ ಮನೆಯ ಬಾಡಿಗೆ ಬರುತ್ತದೆ. ನನಗೆ ಜಮೀನು ಇಲ್ಲ. ನನಗೆ ಒಂದು ತಿಂಗಳಿಗೆ 16 ಸಾವಿರ ರೂ. ಬಾಡಿಗೆ ಬರುತ್ತದೆ. ಈ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ಆಗುವುದಿಲ್ಲ. ಬಾಡಿಗೆ ಬಗ್ಗೆ ಕರಾರು ಪತ್ರ ಮಾಡಿಕೊಂಡಿಲ್ಲ. 12 ವರ್ಷಗಳಿಂದಲೂ ನನಗೆ ಬಾಡಿಗೆ ಬರುತ್ತಿದೆ. ಬಾಡಿಗೆ ಕೊಟ್ಟಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳನ್ನು ಇಲ್ಲ. ನನಗೆ ಎರಡು ಮನೆಗಳು ಇದ್ದು ಅವುಗಳ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ.

2. ಆರೋಪಿ ನಮ್ಮ ಊರಿನವರೇ ಆಗಿರುವುದರಿಂದ ಬಹಳ ವರ್ಷಗಳಿಂದ ನನಗೆ ಪರಿಚಯ. ಅವರು ಗುತ್ತಿಗೆ ಕೆಲಸ ಮಾಡಿಸುತ್ತಾರೆ. ಈ ವ್ಯವಹಾರ ಅಲ್ಲದೇ ಬೇರೆ ವ್ಯವಹಾರ ಮಾಡಿದ್ದು ಪರಸ್ಪರ ಹಣ ಕೊಡುವುದು, ತೆಗೆದುಕೊಳ್ಳುವುದು ಮಾಡುತ್ತಿದ್ದೇವು. ನಾನು ನನ್ನ ಹಣ ಕಾಸಿನ ವ್ಯವಹಾರವನ್ನು ಬ್ಯಾಂಕ್ ಮೂಲಕ ಮಾಡಿಲ್ಲ. ನಾನು 8-10 ವರ್ಷಗಳ ಹಿಂದಿನಿಂದ ತೆರಿಗೆ ಪಾವತಿ ಮಾಡುತ್ತಿದ್ದೆ. ಕೊರೋನ ಬಂದ ನಂತರ ಮಾಡಿಲ್ಲ. ಈ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ಇದ್ದಲ್ಲದೇ ಇನ್ನೂ ಎರಡು ಚೆಕ್ ಪ್ರಕರಣಗಳನ್ನು ದಾಖಲಿಸಿರುತ್ತೇನೆ. ಮಹಮದ್ ಕಲಿ ಅವರ ವಿರುದ್ಧ 2 1/2 ಲಕ್ಷ ರೂ. ಮತ್ತು ದವಲತ್ ಎಂ ರವರ ವಿರುದ್ಧ 2 ಲಕ್ಷ 48 ಸಾವಿರು ರೂ. ಇದೆ. 2015 ರಿಂದ ಇಲ್ಲಿಯವರೆಗೆ ಎಷ್ಟು ಚೆಕ್ ಪ್ರಕರಗಳು ಮುಗಿದಿವೆ ಎಂದು ನೆನಪಿಲ್ಲ. ಜಬಿಉಲ್ಲಾ ರವರ ವಿರುದ್ಧ ಚೆಕ್ ಪ್ರಕರಣ ಹಾಕಿದ್ದೆ ಎನ್ನುವುದು ಸರಿ. ಅದು ಮುಗಿದು ಹೋಗಿದೆ ಆದರೆ ಎಷ್ಟು ಮೊತ್ತ ಎಂದು ನೆನಪಿಲ್ಲ.

3. ಆರೋಪಿಗೆ ಹಣ ಕೊಟ್ಟಾಗ ಬಡ್ಡಿ ಕೊಡುವ ಬಗ್ಗೆ ಮಾತನಾಡಿಲ್ಲ. ನಾನು ಬಡ್ಡಿಗೆ ಹಣ ಕೊಡುವುದಿಲ್ಲ. ದಿನಾಂಕ: 05-11-2018 ರಂದು ಆರೋಪಿ ಹಣ ಕೇಳಿದರು ಕೇಳಿದ ದಿನವೇ ಹಣ

**C.C.224/2019**
**P.W.1**

ಕೊಟ್ಟಿರುತ್ತೇನೆ. ನಾನು ಒಂದು ಗುಂಟೆ ಜಮೀನು ಮಾರಿದ ರೂ. 2 ಲಕ್ಷ 52 ಸಾವಿರ ರೂ. ಮತ್ತು 3 ಲಕ್ಷ ರೂ. ಗೆ ಮನೆ ಬೋಗ್ಯೆ ಹಾಕಿದ ಮೊತ್ತ ಇತ್ತು. ಆರೋಪಿಗೆ ಹಣ ಕೊಡುವ ಮೊದಲೇ ಜನವರಿಯಲ್ಲಿ ಬೋಗ್ಯೆ ಹಾಕಿದ್ದೆ. ನಂತರ ಜಮೀನು ಮಾರಾಟ ಮಾಡಿರುತ್ತೆನೆ. ಈ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ.

4. ಆರೋಪಿ ಅವರ ಅಂಗಡಿಯಲ್ಲಿ ಹಣ ಕೇಳಿದಾಗ ಬೇರೆ ಯಾರು ಇರಲಿಲ್ಲ. ಆರೋಪಿಯ ಅಂಗಡಿಯಲ್ಲೇ ಹಣ ಕೊಟ್ಟಿರುತ್ತೇನೆ. ಆಗಲೂ ಸಹ ಬೇರೆ ಯಾರು ಇರಲಿಲ್ಲ. ಹಣ ಕೊಟ್ಟದಿನವೇ ನಿಪಿ.1 ನ್ನು ಕೊಟ್ಟಿರುತ್ತಾರೆ. ಖುದು ಆರೋಪಿಯೇ ನಿಪಿ.1ನ್ನು ಬರೆದು ನನ್ನ ಮುಂದೆ ಸಹಿ ಮಾಡಿರುತ್ತಾರೆ. ಆರೋಪಿಯೇ ಮೂರು ತಿಂಗಳ ಅವಧಿಯಲ್ಲಿ ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು. ಚೆಕ್ ಹಾಜರುಪಡಿಸುವ ಮೊದಲು ಆರೋಪಿಗೆ ಹಣ ಕೇಳಿಲ್ಲ. ಆ ದಿನವೇ ಅವರು ಚೆಕ್ ಬರೆದುಕೊಟ್ಟಿದ್ದರಿಂದ ಹಾಕು ಎಂದು ಹೇಳಿದ್ದರಿಂದ ಆ ದಿನವೇ ಬ್ಯಾಂಕ್ ಗೆ ಹಾಕಿರುತ್ತೇನೆ ಎಂದು ಸ್ವತಃ ಹೇಳುತ್ತಾರೆ.

5. ನನಗೆ ಬಿಪಿಎಲ್ ಪಡಿತರ ಚೀಟಿ ಇದೆ. ದಿನಾಂಕಃ 05-11-2018 ರಂದು ನನ್ನ ಬಳಿ 7 ಲಕ್ಷ ರೂ. ಹಣ ಇದ್ದು ದಾಖಲಾತಿಗಳು ಇವೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದರು ಮುಂದೂಡಲಾಯಿತು)

<u>ಮರುವಿಚಾರಣೆಃ</u> ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ